ಹರೇ ಶ್ರೀನಿವಾಸ,

ಶ್ರೀವಿಜಯದಾಸರ ಆರಾಧನಾ ಅಂಗವಾಗಿ ಈ ಕಿರು ಕಾಣಿಕೆ :

## : ಚಿಂತೆಯೇತಕೆಂಬ ಸುಳಾದಿ :

ಚಿಂತೆಯೇತಕ್ಕೆ ಜನನ ಅಂತ್ಯಕಾಲವು ಎರಡು । ಎಂಥಾವರಿಗೂ ತಪ್ಪದಂತಿಪ್ಪುದು । ಕಾಂತಾರ ಗಿರಿ ವನ ಮುಂತಾದ ಲೋಕಂಗಳ । ನಿಂತಲ್ಲಿ ನಿಲ್ಲದೆ ತಿರುಗಿದರು । ಪಿಂತಟ್ಟಿ ಮೃತ್ಯುವು ಬಾರದಂತೆ ಇರದು ಕೇಳಿ । ಅಂತರವಿಲ್ಲ ಸಿದ್ಧಾಂತವೆನ್ನಿ ಅಂತರಶುದ್ಧಿಯಾಗಿ ಏ । ಕಾಂತದಲ್ಲಿ ಬಲು ಶಾಂತನಾಗಿ ನಿ । ಶ್ಚಿಂತೆಯಲ್ಲಿ ಸಂತಾಪ ತೊರೆದು । ಅತ್ಯಂತ ಜ್ಞಾನದಲ್ಲಿ ಶ್ರೀಕಾಂತನ ಪಾದಾ । ಕ್ರಾಂತನಾಗಿದ್ದು ಹೃದಯಗ್ರಂಥಿಯ ಪರಿಹರಿಸೊ । ಸಂತತ ಸುತಂತು ವಿಜಯ ವಿಠಲನ್ನ । ಅಂತ್ಯಕಾಲಕ್ಕೆ ನೆನೆವಂತೆ ಸಾಧನ ಬಯಸೊ ॥ ೧॥

ಶರಧಿ ಮೇರೆತಪ್ಪಿ ಬರಲು ತೀವ್ರದಿಂದ । ಭರದಿ ಬಂದು ಮನೆಮಂದಿರದಿ ಕದವನು । ಇರುವೆ ಸಂದಿಸದಂತೆ ಸರಿದರಾ ಸದನ ನಿಂ।ದಿರಬಲ್ಲದೆ ಮರುಳೆ ಅರಿಯೊ । ನೀ ರೂಪವನು ಭ್ರಮಿಸಿ ಕಾಲಮೃತ್ಯು ಅರಸಿಕೊಳ್ಳುತ ಬರಲು । ಸುರರಾದ್ಯರು ಒಲಿದು ಅವರೆಲ್ಲರುಳಿಸುವರೆ । ಬರಿದೆ ಬರಿದೆ ನೀನು ಮರೆಯದಿರೊ ಹರಿಯ ಸ್ಮರಣೆಯನು ನಿನ್ನ ಹಗರಣ ಉಳ್ಳತನಕ ಶಾ । ರ್ವರೀಕರನಾಮ ವಿಜಯ ವಿಠಲನಲ್ಲಿ । ಕರಣಶುದ್ಧಿಯಲ್ಲಿ ಕರ್ಮದೂರನಾಗೊ ॥ ೨ ॥

ಮನಸು ನಾಲ್ಕುಪರಿ ಒಂದೇ ಘಳಿಗೆಯೊಳಗೆ । ನೆನೆಸುವುದು ದ್ವಂದ್ವಾಕಾರ ನಿಶ್ಚಯವೊ ದೆಶೆಯ ನೀಗುತ ಇದ್ದಲ್ಲಿ ಘನ ಶೋಕವೇ ಬಂದು । ತನು ಶುಚಿಯಾಗದೆ ಕೊಡುತಿಪ್ಪುದೊ । ಮನೆ ಸತಿಸುತ ಬಂಧುಬಳಗ ನಾನಾ ದ್ರವ್ಯ । ಎಣಿಸದಿರು ಎಲ್ಲಣಗನಧೀನವೆಂದು ತೃಣಸಮವಾಗಿ । ಕಾಣುವುದೇನೆಂಬೆ ಗುಣಿಸುವುದು ಸಂಸಾರ ಮರೆ ಮೋಸವು । ಫಣಿಶಾಯಿ ಮಹಕರ್ತು ವಿಜಯವಿಠಲರೇಯನ್ನ । ನೆನೆಸು ನಿಶ್ಚಯವಾಗಿ ಮನುಷ್ಯೋತ್ತಮನಾಗಿ ॥ ೩ ॥

ಇಡದಿರು ಪದಾರ್ಥ ಇಂದು ನಾಳೆಗೆ ಎಂದು । ಬಡದಿರು ದೈನ್ಯವ ಒಬ್ಬರಿಗೆ ಪೋಗಿ । ಬಿಡದಿರು ಶುದ್ಧವೃತ್ತಿ ವ್ಯಾಪಾರವ । ನೋಡದಿರು ಹೆಜ್ಜೆಹೆಜ್ಜೆಗೆ ಅಭೇದ । ಹಿಡಿಯದಿರು ಒಕ್ಕುಡಂತಿಗೆ ಹೆಚ್ಚಾಗಿ । ಹಿಡಿಯದಿರು ದೋಷಿಗಳ ಮನೆಧಾನ್ಯವ । ಒಡೆಯನಂತನಾಮ ವಿಜಯವಿಠಲನ್ನ । ಬಿಡದೆ ಮರೆಯದೆ ನೆನೆ ಶುದ್ಧ ಭಕುತಿಲಿ ॥ ೪ ॥

ಜಿಹ್ವೆ ಗುಹ್ಯೇಂದ್ರಿಯ ಉಪಸಂಹಾರ ಮಾಡುತ । ಗಹ್ವರ ಭಕುತಿಯಲ್ಲಿ ಸಿಂಹಲಂಘನೆಯಂತೆ । ಜಾಹ್ನವಿ ಮಿಕ್ಕಾದ ನದಿಕ್ಷೇತ್ರಕ್ಕೆ ಹರಿದುಪೋಗಿ ಪಾಪ । ಸಂಹಾರಗೈಸಿ ಸಿಂಹನಾಮ ಪರದೈವ ವಿಜಯವಿಠಲನ್ನ । ಜಿಹ್ವಾಗ್ರದಲ್ಲಿ ನೆನೆಸು ಹೃನ್ಮಧ್ಯದಲ್ಲಿ ನಿಲಿಸು ॥ ೫ ॥

ಜತೆ : ಕ್ಷೇತ್ರವುಳ್ಳಾಗ ಸಂಪಾದಿಸು ಗುರುಕರುಣ ।
ಶತ್ರುತಾಪನ ನಮ್ಮ ವಿಜಯವಿಠಲನ್ನ ಬಲಗೊಳ್ಳು

हरे श्रीनिवास,

श्रीविजयदासर आराधना अंगवागि ई किरु काणिके :

: चिंतेयेतकेंब सुळादि :

चिंतेयेतक्के जनन अंत्यकालवु एरडु । एंथावरिगू तप्पदंतिप्पुदु । कांतार गिरि वन मुंताद लोकंगळ । निंतल्लि निल्लदे तिरुगिदरु । पिंत मृत्युवु बारदंते इरदु केळि । अंतरविल्ल सिद्धांतवेन्नि अंतरशुद्धियागि ऐ । कांतदल्लि बलु शांतनागि नि । श्चिंतेयल्लि संताप तोरेदु । अत्यंत ज्ञानदल्लि श्रीकांतन पादा । क्रांतनागिद्दु हृदयग्रंथिय परिहरिसो । संतत सुतंतु विजय विठलन्न । अंत्यकालक्के नेनेवंते साधन बयसो ॥ १॥

शरधि मेरेतप्पि बरलु तीव्रदिंद । भरदि बंदु मनेमंदिरदि कदवनु । इरुवे संदिसदंते सरिदरा सदन निंदिरबल्लदे मरुळे अरियो । नी रूपवनु भ्रमिसि कालमृत्यु अरसिकोळ्ळुत बरलु । सुराद्यरु ओलिदु अवरेल्लरुळिसुवरे । बरिदे बरिदे नीनु मरेयदिरो हरिय स्मरणेयनु निन्न हगरण उळ्ळतनक शा । र्वरीकरनाम विजय विठलनल्लि । करणशुद्धियल्लि कर्मदूरनागो ॥ २ ॥

मनसु नाल्कुपरि ओंदे घळिगेयोळगे । नेनेसुवुदु द्वंद्वाकार निश्चयवो देशेय नीगुत इद्दल्लि घन शोकवे बंदु । तनु शुचियागदे कोडुतिप्पुदो । मने सतिसुत बंधुबळग नाना द्रव्य । एणिसदिरु एल्लणगनधीनवेंदु तृणसमवागि । काणुवुदेनेंबे गुणिसुवुदु संसार मरे मोसवु । फणिशायि महकर्तु विजयविठलरेयन्न । नेनेसु निश्चयवागि मनुष्योत्तमनागि ॥ ३ ॥

इडदिरु पदार्थ इंदु नाळेगे एंदु । बडदिरु दैन्यव ओब्बरिगे पोगि । बिडदिरु शुद्धवृत्ति व्यापारव । नोडदिरु हेज्जेहेज्जेगे अभेद । हिडियदिरु ओक्कुडंतिगे हेच्चागि । हिडियदिरु दोषिगळ मनेधान्यव । ओडेयनंतनाम विजयविठलन्न । बिडदे मरेयदे नेने शुद्ध भकुतिलि ॥ ४ ॥

जिह्वे गुह्येंद्रिय उपसंहार माडुत । गह्वर भकुतियल्लि सिंहलंघनेयंते । जाह्नवि मिक्काद नदिक्षेत्रक्के हरिदुपोगि पाप । संहारगैसि सिंहनाम परदैव विजयविठलन्न । जिह्वाग्रदल्लि नेनेसु हृन्मध्यदल्लि निलिसु ॥ ५ ॥

जते : क्षेत्रवुळ्ळाग संपादिसु गुरुकरुण ।
शत्रुतापन नम्म विजयविठलन्न बलगोळ्ळु

Collection By S K PATIL